## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021-22ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಛೇರಿ ಹಾಗೂ ಅದರ ವ್ಯಾಪ್ತಿಯಡಿಯ ಅಧೀನ ಕಛೇರಿಗಳ ದಿನಗೂಲಿ ಸಿಬ್ಬಂದಿಗಳ ಉಪಧನ ಪಾವತಿಗಾಗಿ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:** 1) ಆರ್ಥಿಕ ಇಲಾಖೆಯ ಅಧಿಕಾರ ಪ್ರತ್ಯಾಯೋಜನೆ ಸಂಖ್ಯೆ:ಎಫ್ ಡಿ:1 ಟಿ ಎಫ್ ಪಿ:2021, ಬೆಂಗಳೂರು, ದಿನಾಂಕ: 30.09.2021.

2) ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 78 ವೆಚ್ಚ 6/2021 ಇ, ದಿನಾಂಕ: 09.08.2021.

3) ಆರ್ಥಿಕ ಇಲಾಖೆಯ ಅನುಮತಿ ಪತ್ರ ಸಂಖ್ಯೆ: ಆಇ 02 ಬಿಎಸ್ ಜಿ 2021, ದಿನಾಂಕ: 12.10.2021.

**ಪೀಠಿಕೆ:**

2021-22ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ **ಲೆಕ್ಕ ಶೀರ್ಷಿಕೆ:2215-01-001-1-03-251(ಯೋಜನೇತರ)** ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳಿಗಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಅಧೀನ ಕಛೇರಿಗಳ ದಿನಗೂಲಿ ಸಿಬ್ಬಂದಿಗಳ ಉಪಧನ ಪಾವತಿಗಾಗಿ ಪೂರಕ ಅಂದಾಜು-1 ರಡಿ ರೂ. 488.21 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಅಧೀನ ಕಛೇರಿಗಳ ವೇತನೇತರ ವೆಚ್ಚಕ್ಕಾಗಿ **ರೂ. 4,88,21,000/- ಗಳ** ಅನುದಾನವನ್ನು **ಖಜಾನೆ-02** ರ ಮೂಲಕ ಬಿಡುಗಡೆ ಮಾಡಲು ನಿರ್ಣಯಿಸಲಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ:ಗ್ರಾಕುನೀ&ನೈಇ/ACCTONSG/1/(ಇ-ಆಫೀಸ್)/2021, ಬೆಂಗಳೂರು, ದಿನಾಂಕ: 07-12-2021**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವ್ಯಾಪ್ತಿಯ ಅಧೀನ ಕಛೇರಿಗಳಲ್ಲಿನ ದಿನಗೂಲಿ ಸಿಬ್ಬಂದಿಗಳ ಉಪಧನ ಪಾವತಿಗಾಗಿ ವೇತನೇತರ ವೆಚ್ಚದಡಿ ಈ ಕೆಳಕಂಡ ಲೆಕ್ಕ ಉಪಶೀರ್ಷಿಕೆಯಲ್ಲಿ ಒಟ್ಟು **ರೂ.4,88,21,000/-** ಗಳ **(ರೂಪಾಯಿ ನಾಲ್ಕು ಕೋಟಿ ಎಂಭತ್ತೆಂಟು ಲಕ್ಷದ ಇಪ್ಪತ್ತೊಂದು ಸಾವಿರಗಳು ಮಾತ್ರ)** ಅನುದಾನವನ್ನು ಈ ಕೆಳಗಿನಂತೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ:-

| **ಲೆಕ್ಕ ಶೀರ್ಷಿಕೆ** 2215-01-001-1-03-251 (ಯೋಜನೇತರ) ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು | | |
|---|---|---|
| ಕ್ರ.ಸಂ. | ವಿಭಾಗದ ವಿವರ | ದಿನಗೂಲಿ ಉಪಧನ ಪಾವತಿಗಾಗಿ ಅನುದಾನ ರೂ.ಲಕ್ಷಗಳಲ್ಲಿ |
| 1 | ಹರಪನಹಳ್ಳಿ | 14.23 |
| 2 | ಬೆಳಗಾವಿ | 27.54 |
| 3 | ರಾಮನಗರ | 22.95 |
| 4 | ಮಂಡ್ಯ | 46.64 |
| 5 | ಕಲಬುರಗಿ | 133.37 |
| 6 | ಧಾರವಾಡ | 37.22 |
| 7 | ವಿಜಯಪುರ | 49.58 |
| 8 | ಶಿವಮೊಗ್ಗ | 20.16 |
| 9 | ಬೀದರ್ | 79.98 |
| 10 | ಹಾಸನ | 16.13 |
| 11 | ಬಾಗಲಕೋಟೆ | 20.10 |
| 12 | ಚಿಕ್ಕೋಡಿ | 20.31 |
| | ಒಟ್ಟು | 488.21 |

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಅಧಿಕಾರ ಪ್ರತ್ಯಾಯೋಜನೆ ಸಂಖ್ಯೆ:ಎಫ್ ಡಿ:1 ಟಿ ಎಫ್ ಪಿ:2021, ಬೆಂಗಳೂರು, ದಿನಾಂಕ: 30.09.2021, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 78 ವೆಚ್ಚ 6/2021 ಇ, ದಿನಾಂಕ: 07.09.2021, ಮತ್ತು

ಆರ್ಥಿಕ ಇಲಾಖೆಯ ಅನುಮತಿ ಪತ್ರ ಸಂಖ್ಯೆ: ಆಇ 02 ಬಿಎಸ್ ಜಿ 2021, ದಿನಾಂಕ:12.10.2021 ರ ಮೇರೆಗೆ ಹೊರಡಿಸಲಾಗಿದೆ.

3. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವಿನಿಯೋಗಿಸಲು ಆದೇಶಿಸಿದೆ:-

ಷರತ್ತುಗಳು:

1. ದಿನಗೂಲಿ ಸಿಬ್ಬಂದಿಗಳ ಉಪಧನ ಪಾವತಿಗಾಗಿ ಮಾತ್ರ ಈ ಅನುದಾನವನ್ನು ಬಳಸಿಕೊಳ್ಳತಕ್ಕದ್ದು.
2. ಈ ಅನುದಾನವನ್ನು ಕರ್ನಾಟಕ ನಾಗರೀಕ ಸೇವಾ ನಿಯಮ ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ನಿಯಮಗಳನ್ವಯ ವಿನಿಯೋಗಿಸತಕ್ಕದ್ದು.
3. ಈ ಅನುದಾನವನ್ನು ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012 ರಡಿ ಅಧಿಸೂಚಿತ ದಿನಗೂಲಿ ನೌಕರರಿಗೆ ಎಕ್ಸ್ ಗ್ರೇಷಿಯಾ ಹಾಗೂ ಉಪಧನ ನಡುವಿನ ವ್ಯತ್ಯಾಸದ ಮೊತ್ತವನ್ನು ಮಾತ್ರ ದೃಢಪಡಿಸಿಕೊಂಡು ಪಾವತಿಸತಕ್ಕದ್ದು.
4. ಸದರಿ ಸಿಬ್ಬಂದಿಗಳು 6ನೇ ವೇತನದ ವ್ಯಾಪ್ತಿಯಡಿ ಬರುತ್ತಾರೆಯೇ ಎಂದು ಖಾತ್ರಿ ಪಡಿಸಿಕೊಳ್ಳತಕ್ಕದ್ದು.
5. ಕರ್ನಾಟಕ ರಾಜ್ಯಪತ್ರದಡಿ ಇವರ ಕ್ರಮ ಸಂಖ್ಯೆಯನ್ನು ಖಾತ್ರಿ ಪಡಿಸಿಕೊಂಡು, ಪಾವತಿಯಾಗಿದ್ದಲ್ಲಿ ಪುನ: ಪಾವತಿಸದಂತೆ ಜಾಗ್ರತೆ ವಹಿಸತಕ್ಕದ್ದು.
6. ಇದು One Time DCRG Settlement ಮಾತ್ರವಾಗಿರುತ್ತದೆ.
7. ಖಜಾನೆ-2 ತಂತ್ರಾಂಶದ ಮುಖಾಂತರ ಸಂಬಂಧಿಸಿದ ಕಛೇರಿಗಳ ವಿಷಯ ನಿರ್ವಾಹಕರು ಬಿಲ್ಲುಗಳನ್ನು ತಯಾರಿಸಬೇಕು.
8. ಈ ರೀತಿ ತಯಾರಿಸಲಾದ ಬಿಲ್ಲುಗಳೊಂದಿಗೆ ಆಯಾಯ ಕಛೇರಿಯ ನಿಯೋಜಿತ ಪರೀಕ್ಷಕರು ಪರೀಕ್ಷಿಸಿ, ಬಟವಾಡೆ ಅಧಿಕಾರಿಗಳಿಗೆ ಅನುಮೋದನೆಗಾಗಿ ಕಳುಹಿಸಿಕೊಡತಕ್ಕದ್ದು.
9. ತದನಂತರ, ಅಂತಿಮ ಬಿಲ್ಲನ್ನು ತಯಾರಿಸಿ, ಸಹಿಯೊಂದಿಗೆ ಸಂಬಂಧಿಸಿದ ಕಛೇರಿಯ ಮುಖ್ಯಸ್ಥರಿಗೆ ಮೇಲುರುಜುವಿಗೆ ಕಳುಹಿಸಿಕೊಡತಕ್ಕದ್ದು.
10. ಕೇಂದ್ರ ಕಛೇರಿಯಲ್ಲಿ ಖಜಾನೆ-2ರ ಮುಖಾಂತರ ತಯಾರಿಸಲಾದ ಸಾದಿಲ್ವಾರು ಬಿಲ್ಲುಗಳಿಗೆ ಆಯುಕ್ತರು, ಗ್ರಾ.ಕು.ನೀ.&ನೈ.ಇಲಾಖೆ ಇವರು ಮೇಲು ರುಜು ಅಧಿಕಾರಿಗಳಾಗಿರುತ್ತಾರೆ.
11. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಖಜಾನೆ-2ರ ಮುಖಾಂತರ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿ/ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲು ಕ್ರಮವಹಿಸತಕ್ಕದ್ದು.
12. ಸಂಬಂಧಿಸಿದ ಬಟವಾಡೆ ಅಧಿಕಾರಿಯು ಖಜಾನೆ-2 ರ ಮುಖಾಂತರ ತಯಾರಿಸಲಾದ ಕೆ.ಎಫ್.ಸಿ.ಯ ನಮೂನೆ 62(ಬಿ)ಯೊಂದಿಗೆ ಲೆಕ್ಕ ಮರುಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
7/12/2021

ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ),
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು(ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು(ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರುಗಳು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ.ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಆಯುಕ್ತರು, ಗ್ರಾ.ಕು.ನೀ.&ನೈ.ಇಲಾಖೆ, ಕಾವೇರಿ ಭವನ, ಬೆಂಗಳೂರು.
11. ಮುಖ್ಯ ಅಭಿಯಂತರು, ಗ್ರಾ.ಕು.ನೀ.&ನೈ.ಇಲಾಖೆ, ಕಾವೇರಿ ಭವನ, ಬೆಂಗಳೂರು.
12. ರಾಜ್ಯದ ಎಲ್ಲಾ 30 ಜಿಲ್ಲಾಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ವಿಶೇಷಾಧಿಕಾರಿ(ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
15. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಖಜಾನೆ ಇಲಾಖೆ, ಬೆಂಗಳೂರು.
16. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.&ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
17. ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, 04 ವೃತ್ತ ಕಛೇರಿಗಳು,
18. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ 30 ಜಿಲ್ಲೆಗಳು,
19. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ. & ನೈ.ಇಲಾಖೆ, ಕಾವೇರಿ ಭವನ, ಬೆಂಗಳೂರು.
20. ರಾಜ್ಯದ 30 ಜಿಲ್ಲಾ ಪಂಚಾಯತ್ ಗಳ ಮುಖ್ಯ ಲೆಕ್ಕಾಧಿಕಾರಿಗಳು.
21. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ", ಗ್ರಾ.ಅ.&ಪಂ.ರಾಜ್ ಇಲಾಖೆ, ಬೆಂಗಳೂರು.
22. ರಾಜ್ಯದ ಎಲ್ಲಾ 32 ಗ್ರಾ.ಕು.ನೀ.&ನೈ.ವಿಭಾಗ ಕಛೇರಿಗಳ ಕಾರ್ಯಪಾಲಕ ಅಭಿಯಂತರರು (32 ವಿಭಾಗ ಕಛೇರಿಗಳ ಮುಖಾಂತರ ರಾಜ್ಯದ ಎಲ್ಲಾ 176 ಉಪ ವಿಭಾಗ ಕಛೇರಿಗಳಿಗೆ).
23. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖಜಾನೆ ಇಲಾಖೆ, ಬೆಂಗಳೂರು.
24. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ(6)(ಜಿಪಂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
25. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.&ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು (ವಾರದ ಗೆಜೆಟ್ ನಲ್ಲಿ ಪ್ರಕಟಿಸಲು 5 ಪ್ರತಿಗಳು).
26. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ), ಬೆಂಗಳೂರು.
27. ಗ್ರಾ.ಅ.ಮತ್ತು ಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ , ಬಹುಮಹಡಿ ಕಟ್ಟಡ, ಬೆಂಗಳೂರು (10 ಪ್ರತಿಗಳು).
28. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.